ಬೇಡ ಅಂದಿದ್ದು.' ಅಮ್ಮನೂ ಏರು ದನಿಯಲ್ಲಿ ನಿಂತರು.

'ಏನಂತ ತಿಳಕೊಂಡಿದ್ದೀಯ ನೀನು! ನನ್ನ ಮಗಳನ್ನ ಅಡುಗೆ ಕೆಲಸಕ್ಕೆ ಹಾಕ್ಕೊಂಡಿದ್ದೀಯ. ಅವಳ ಜೀವನಾನೆ ಹಾಳಾಗುತ್ತೆ ನೋಡ್ತ ಇರು. ಇದು ಸರಿ ಅಲ್ಲ' ಅಪ್ಪ ಸಿಡುಕಿದರು.

'ಮುಂದೆ ಅವಳು ಮಾಡೋದು ಅಡುಗೆ ಕೆಲಸ ತಾನೇ! ಡಿಗ್ರಿ ಸರ್ಟಿಫಿಕೇಟ್‌ನ ನೆಕ್ಕೋಕೆ ಆಗುತ್ತಾ!' ಅಮ್ಮನ ತಿರಸ್ಕಾರ. 'ಈಗ್ಲಿಂದ ಎಲ್ಲ ಕಲೀತಿದ್ದಾಳೆ. ಕಲೀಲಿ ಬಿಡಿ. ನೋಡ್ತೀನಲ್ಲ, ಉಪ್ಪು ಸಕ್ಕರೆ ಎಲೆಲಿ ಎಡ ಬಲ ತಿಳಿಯಲ್ಲ ನಿಮ್ಮ ಉಳಿದ ಮಕ್ಕಳಿಗೆ. ಇವಳು ಎಲ್ಲದನ್ನೂ ಎಷ್ಟು ಅಚ್ಚುಕಟ್ಟಾಗಿ ನಿಭಾಯಿಸ್ತಾಳೆ. ಇವಳು ಶಾಲೆಗೆ ಹೋಗಿ ಮಣ್ಣು ಹೊರೋದು ಏನು ಬೇಕಾಗಿಲ್ಲ.' ಅಲ್ಲಿಗೆ ತನ್ನ ಶಾಲೆಯ ಕೊಂಡಿ ಮುಗಿದಿತ್ತು. ಹಬ್ಬ, ಹರಿದಿನಗಳು, ಪರೀಕ್ಷೆಯ ದಿನಗಳು... ಎಲ್ಲದಕ್ಕೂ ನೆಂಟರಿಷ್ಟರಿಗೆಲ್ಲ ನಮ್ಮ ಮನೆಯೇ ಕೇಂದ್ರ. ಎಲ್ಲರಲ್ಲೂ ಒಂದೇ ಮಾತು... 'ವಾಸಂತಿ ಇದ್ರೆ ನೋಡಪ್ಪ. ಒಂದಿಷ್ಟೂ ಏರು ಪೇರಾಗದೆ ಕೆಲಸ ನಡೆಯುತ್ತೆ.' ತನಗೂ ಹಿಗ್ಗು. ಯಾರಿಗೂ ಸಿಗದ ಈ ಹೊಗಳಿಕೆಗಳು ತನ್ನ ಪಾಲಿಗೆ ಬರುತ್ತವೆ ಎಂದು.

ಅವರ ಕೆಲಸಗಳೆಲ್ಲ ಏರು ಪೇರಾಗದೇ ನಡೆಯಿತು. ಆದರೆ ತನ್ನ ಬದುಕೇ ಏರುಪೇರಾಗಿಬಿಟ್ಟಿತು!

ಅವತ್ತು ಉಗಾದಿ ಹಬ್ಬ. ಮನೆ ತುಂಬ ನೆಂಟರು. ನನಗೋ ಅಮ್ಮಂಗೆ ಸಹಾಯ ಮಾಡ್ತ, ಎಲ್ಲರಿಗೂ ಬಡಿಸ್ತ ಬಡಿಸ್ತ... ಎಲೆ ಎತ್ತೋದು, ಗೋಮಯ ಮಾಡೋದು ಈ ಕೆಲಸಗಳ ಭರಾಟೆಯಲ್ಲಿ ತಲೆ ಬಾಚಿಕೊಳ್ಳಲೂ ಪುರಸೊತ್ತಿಲ್ಲ. ತಲೆ ತುಂಬಾ ಮಂಡಿಯಿಂದ ಕೆಳಗಿಳಿಯುವವರೆಗಿನ ದಟ್ಟ ಕೂದಲು. ಜಡೆ ಹಾಕಿಸಿಕೊಳ್ಳಲೂ ಪುರಸೊತ್ತಿಲ್ಲ. ತಂಗಿ ಸುಮತಿ ಜೋರು ಜಗಳ ತೆಗೆದಿದ್ದಳು.

'ನನ್ನ ಹಸಿರು ರೇಶ್ಮೆ ಲಂಗ ಎಲ್ಲೆ ಅಕ್ಕಾ?...' ಅಲಮಾರೆಲ್ಲ ಕೆದರಾಡಿ ಚೀರಿದಳು. 'ಇವತ್ತು ಹಾಕ್ಕೊಳ್ಳೋಕೆ ನನಗೆ ಬೇಕಿತ್ತು... ಎಲ್ಲೇ... ಅಕ್ಕಾ... ಅಕ್ಕೀ...'

ಬೈಯ್ಯುವಾಗ ಅವಳ ಬಾಯಿಯಲ್ಲಿ ನಾನು ಅಕ್ಕಿ ಆಗಿಬಿಡುತ್ತಿದ್ದೆ. ಹಾಗೇ ಬೈಗುಳ ಮುಂದೆ ಸಾಗಿ, ಗೋಧಿ, ರಾಗಿ, ಜೋಳ... ಎಲ್ಲ ಆಗಿಬಿಡುತ್ತಿತ್ತು. ವಾಸಂತಿ ನೆನೆಯುತ್ತಾ ನಕ್ಕಳು.

ನಾನು ಮನೆಯಲ್ಲೇ ಇದ್ದಿದುರಿಂದ ಎಲ್ಲರ ಬಟ್ಟೆ ಬರೆಗಳನ್ನು ಒಗೆಯುವುದು, ಮಡಿಸಿಡುವುದು, ಇಸ್ತ್ರಿ ಹಾಕುವುದು ಎಲ್ಲ ನನ್ನ ಪಾಲಿನ ಕೆಲಸಗಳಾಗಿದ್ದವು. ಹಬ್ಬಕ್ಕೆಂದೇ ನನ್ನ ಕೆಂಪು ರೇಷ್ಮೆ ಲಂಗ ಮತ್ತು ಅವಳ ಹಸಿರು ಲಂಗಗಳನ್ನು ನಾನೇ ತೆಗೆದಿಟ್ಟು ಇಸ್ತ್ರಿ ಮಾಡಿಟ್ಟಿದ್ದೆ. ಆದರೆ ಚಿಕ್ಕಮ್ಮನ ಮಗಳು ವಿಜಯಳಿಗೆ ಆ ಲಂಗ ಇಷ್ಟ ಎಂದು ಹಾಕಿಕೊಂಡು ಹೋಗಿಬಿಟ್ಟಿದ್ದಳು. ನಾನು ಹಾಗೂ ಹೇಳಿದ್ದೆ, 'ವಿಜೀ ಇದು ಸುಮಂದು ಕಣೆ. ಅವಳು ರಾದ್ಧಾಂತ ಮಾಡ್ತಾಳೆ'. ಅಮ್ಮ ಹೇಳಿದ್ರು, 'ಇರಲಿ ಬಿಡೆ. ಅದೂ ಕೂಡ ನಿನ್ನ ತಂಗೀನೇ ಅಲ್ವೇ. ಹಾಕ್ಕೊಂಡು ಹೋಗಲಿ ಬಿಡು. ಅದಕ್ಕೆ ಹಬ್ಬದ ದಿನ ಯಾಕೆ ಬೇಜಾರು ಮಾಡಬೇಕು'. 'ಅಮ್ಮ, ನಮ್ಮನೇದು ಇದ್ಯಲ್ಲ, ಅದು ತುಂಬಾ ರಾದ್ಧಾಂತ ಮಾಡುತ್ತಮ್ಮ...' ನಾನು ಅಳುಕಿನಿಂದಲೇ ಹೇಳಿದೆ.

'ಇರಲಿ ಬಿಡೇ... ಇದಕ್ಕೆ ಬಿಟ್ಟುಕೊಡೋದನ್ನ ಕಲಿಸಬೇಕು. ಗುಲಾಬಿ ಬಣ್ಣದ್ದಿದೆಯಲ್ಲ ಅದನ್ನ ತೆಗೆದಿಡು. ಹಾಕ್ಕೊಳ್ಳಿ. ಎಲ್ಲಾ ತನ್ನ ಮೂಗಿನ ನೇರಕ್ಕೇ ಆಗಬೇಕು ಅಂದ್ರೆ ಹೇಗೆ!' ಅಮ್ಮ ಒಬ್ಬಟ್ಟು ಮಾಡುತ್ತಲೇ ಇದ್ದಳು.

ಆದರೆ ಸಂಜೆ ಬಂತಲ್ಲ... ಮರೆಯಲಾಗದ ಕುರುಕ್ಷೇತ್ರ ಆಗಿಬಿಟ್ಟಿತು ಮನೆ. ಅಕ್ಕಿ, ಗೋಧಿ, ಪರಂಗಿ, ಹಲ್ವ, ಗೋಡಂಬಿ, ದ್ರಾಕ್ಷಿ... ಅಂತ ಬಾಯಿಗೆ ಬಂದ ಪದಾರ್ಥಗಳನ್ನೆಲ್ಲ ಹೇಳುತ್ತ ನನ್ನ ಜನ್ಮ ಜಾಲಾಡಿಬಿಟ್ಟಳು. ಮನೆಯಲ್ಲಿದ್ದವರೆಲ್ಲ ಮೂಕ ಪ್ರೇಕ್ಷಕರು. ಮಹಡಿಮೇಲಿದ್ದವರು, ಹಿಂದಿನ